

'ಲಕ್ಷ್ಮೀ! ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ನಾವು ಮದುವೆ ಮಾಡಿಕೊಳ್ಳುವ ಮುನ್ನ ಹೊಸ ಪದ್ಧತಿಗಳನ್ನು ಅನುಸರಿಸಬೇಕು. ಮೊದಲು ಕೆಲಕಾಲ ಇಬ್ಬರೂ ಜೊತೆಗೆ ಲಿವಿಂಗ್ ಟುಗೆದರ್ ಇರೋಣ. ಒಬ್ಬರಿಗೊಬ್ಬರಿಗೆ ತುಂಬಾ ಹೊಂದಾಣಿಕೆ ಆಗಿ ಇಷ್ಟಪಟ್ಟರೆ ಮದುವೆ ಆಗೋಣ. ಇಲ್ಲಾಂದ್ರೆ... ನಾವಿಬ್ಬರೂ ಜೊತೆಗಿರೋದೇ ದೊಡ್ಡ ತಪ್ಪು ಅಂತ ಅನಿಸಿದ್ರೆ ಹಾಯಾಗಿ ಫ್ರೆಂಡ್ಲಿಯಾಗಿ ದೂರವಾಗೋಣ.'

'ಓ.ಕೆ. ನಾವೇನೋ ಬೇರೆಯಾಗ್ತೀವಿ. ನಮ್ಮ ತಪ್ಪುಗಳನ್ನು ಏನು ಮಾಡೋಣ?'

'ಅಂದ್ರೆ?!'

'ಮಕ್ಕಳಾದ್ರೆ ಏನು ಮಾಡೋಣ ಅಂತ...?!'

★★★

ಹುಚ್ಚಾಸ್ಪತ್ರೆಯಲ್ಲಿ ರೋಗಿಯೊಬ್ಬ ಚಪ್ಪಾಳೆ ತಟ್ಟುತ್ತಲೇ ಇದ್ದ. ಇದನ್ನು ಗಮನಿಸಿದ ಅದೇ ತಾನೆ ಹೊಸದಾಗಿ ಸೇರಿದ ವೈದ್ಯ.

'ಏನೋ! ಯಾಕೆ ಸುಮ್ಮನೆ ಚಪ್ಪಾಳೆ ತಟ್ಟುತ್ತಿದ್ದೀಯ?' ಕುತೂಹಲದಿಂದ ಕೇಳಿದ.

ರೋಗಿ: ಅಷ್ಟೂ ಗೊತ್ತಿಲ್ವಾ ಡಾಕ್ಟರ್? ಚಪ್ಪಾಳೆ ಹೊಡೆಯುತ್ತಿದ್ದರೆ ಸಿಂಹಗಳು ನಮ್ಮ ಹತ್ತಿರ ಬರೋದಿಲ್ಲ.

ವೈದ್ಯ: ಇಲ್ಲಿ ಸಿಂಹಗಳೇನೂ ಬಂದಿಲ್ಲವಲ್ಲ?

ರೋಗಿ: ಇರೋಕೆ ಹೇಗೆ ಸಾಧ್ಯ ಡಾಕ್ಟ್ರೇ? ನಾನು ಚಪ್ಪಾಳೆ ತಟ್ಟೋದು ನಿಲ್ಸೇ ಇಲ್ವಲ್ಲಾ!

★★★

'ಅಬ್ಬಾ! ಬಹಳ ದೂರ ಕೆಲ್ಸ ಕೊಟ್ಟಿದ್ದಾರಂತಲ್ಲೋ!' ಹೊಸದಾಗಿ ಶಿಕ್ಷಕನಾಗಿ ನೇಮಕಗೊಂಡ ಗೋಣಿ ಬಸಪ್ಪನನ್ನು ಕೇಳಿದ ಗೆಳೆಯ.

'ಹೌದು! ಅದಕ್ಕಾಗಿಯೇ ವಾರಕ್ಕೆರಡು—ಮೂರು ಸಾರಿ ಹೋಗಿಬರೋದು'

'ಮನೆಗಾ?' ಆಶ್ಚರ್ಯದಿಂದ ಮತ್ತೆ ಕೇಳಿದ ಗೆಳೆಯ.

'ಅಲ್ಲ... ಸ್ಕೂಲಿಗೆ' ಉತ್ತರಿಸಿದ ಗೋಣಿ ಬಸಪ್ಪ.

★★★

ತಂದೆ: ಪರೀಕ್ಷೆಗೆ ಯಾಕೋ ಹೋಗಿಲ್ಲ?

ಮಗ: ಪ್ರಶ್ನೆ ಪತ್ರಿಕೆ ತುಂಬಾ ಕಷ್ಟ ಇದೆಯಪ್ಪಾ...

ತಂದೆ: ಪರೀಕ್ಷೆಗೆ ಹೋಗದೆ ಹೇಗೆ ಹೇಳ್ತೀಯಾ?

ಮಗ: ಅದು ನಿನ್ನೆಯೇ ಸೋರಿಕೆಯಾಗಿತ್ತು.

★★★

ರಾಮು: ಮಕ್ಕಳು ದೇವರ ಸಮಾನ ಅಂತಾರಲ್ಲ ನಿಜಾನಾ?

ತಂದೆ: ಹೌದು, ಈಗ್ಯಾಕೋ ಬಂತು ಆ ಸಂದೇಹ?

ರಾಮು: ಅಪ್ಪ ನಿಮ್ಮ ಮೊಬೈಲ್ ಕೈ ಜಾರಿಬಿದ್ದು ನುಜ್ಜುಗುಜ್ಜಾಗಿದೆ!

(ಸಂಗ್ರಹ): **ರಾಮಪ್ರಸಾದ. ಬಿ., ಕೊಪ್ಪಳ**

ಟೀಚರ್: ಇನ್ನು ಪರೀಕ್ಷೆಗಳು ಒಂದೇ ವಾರ, ಹತ್ತಿರವಿದೆ. ನಿಮಗೇನು ಡೌಟ್ಸ್ ಇದ್ದರೂ ನನ್ನನ್ನು ಕೇಳಿ ತಿಳಕೊಳ್ಳಿ.

ಪುಂಡಲೀಕ: ಪ್ರಶ್ನೆಪತ್ರಿಕೆಗಳು ಎಲ್ಲಿ ಪ್ರಿಂಟಾಗ್ತಿವೆ ಟೀಚರ್?

★★★

ಡಾಕ್ಟರ್: ನಿನಗೆ ವಿಧ ವಿಧವಾದ ನಾಲ್ಕು ತರಹ ಔಷಧಿಗಳನ್ನು ಬದಲಾಯಿಸಿ ಕೊಟ್ಟೆ, ವ್ಯಾಧಿ ವಾಸಿಯಾಗಲಿಲ್ಲ. ಇನ್ನು ನಾನು ಈಗ ಯಾವ ಔಷಧಗಳನ್ನು ಬದಲಾಯಿಸಬೇಕೆಂದು ನೋಡುತ್ತಿದ್ದೇನೆ.

ಪುಂಡಲೀಕ: ಬೇಡ ಬಿಡಿ ಡಾಕ್ಟರೇ... ನಾನು ಡಾಕ್ಟರನ್ನೇ ಬದಲಾಯಿಸ್ತೀನಿ!


★★★

ಶಿಂಗಲೀಕ: ಹಲೋ ಪುಂಡಲಿಕ! ನಿನ್ನ ಹೆಂಡತಿ ಮನೆ ಅಡಿಗೆ ಭಟ್ಟನ ಜೊತೆ ಓಡಿಹೋದಳು ಎಂಬ ಸುದ್ದಿ ಕೇಳಿ ನನಗೆ ಬಹಳ ದುಃಖ ಆಯ್ತುಯ್ಯಾ!

ಪುಂಡಲೀಕ: ನನ್ನ ದುಃಖನೂ ಅದೇ ಕಣಯ್ಯ... ಅಂಥ ಒಳ್ಳೆ ಅಡಿಗೆ ಭಟ್ಟ ಇನ್ನೆಲ್ಲಿ ಸಿಕ್ತಾನೆ ಅಂತ!

(ಸಂಗ್ರಹ): **ಜಿ.ವಿ. ಪ್ರಭು, ಬೆಂಗಳೂರು**



ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ

ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು
9611002265
ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೇದನ ಮುಂತಾದ
ಇನ್ನೂ ಅತೀ ಜಟಿಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.
ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.
ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.
ನಿಮ್ಮ ಸಮಸ್ಯಗಳನ್ನು ಗುಪ್ತವಾಗಿ ಇಡಲಾಗುವುದು.
ಆಫೀಸ: ಧಮ್ಮಣಗಿ ಪ್ರೇಸ್ಟೀಜ್ ಪ್ಲಾಜಾ ಎಫ್ 13, ಹೊಟೇಲ ಅಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.
ಮನೆ: ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.
0836-2282265
E-mail: mbjoshiastro@gmail.com